

ಡಾ.ವಿನೋದ ಛೆಬ್ಬಿ

**ಕಾಮಕ್ರಿಯೆಯ ಬಗೆಗೆ ತಾಯ್ತಂದೆಯರ ಮೂಲಕ ತಿಳಿದುಕೊಳ್ಳುವುದು ಸಹಜತೆಗೂ ಪ್ರಕೃತಿಗೂ ಹತ್ತಿರವಾಗುತ್ತದೆ!**

# 289: ಹೊಸ ದಾರಿ - 29

ಪ್ರತಿಯೊಬ್ಬರಲ್ಲಿ ಕಾಮಭಾವನೆಗಳ ಆರೋಗ್ಯಕರ ಬೆಳವಣಿಗೆ ಎಂದಿರುತ್ತದೆ ಎನ್ನುವ ಪರಿಕಲ್ಪನೆಯೇ ನಮ್ಮಲ್ಲಿಲ್ಲ ಎಂದು ಹೇಳುತ್ತಿದ್ದೆ. ಆರೋಗ್ಯಕರ ಇಲ್ಲದಾಗ ಏನಾಗುತ್ತದೆ? ಬೆಳವಣಿಗೆಯೇನೂ ನಿಲ್ಲುವುದಿಲ್ಲ, ಅಡ್ಡಹಾದಿ ಹಿಡಿಯುತ್ತದಷ್ಟೆ. ಹೀಗಾದಾಗ ಹುಟ್ಟುವ ಸೂಕ್ಷ್ಮ ಸಮಸ್ಯೆಯೊಂದನ್ನು ಎತ್ತಿಕೊಳ್ಳೋಣ. ಪ್ರಸಂಗ: ಹೋದ ಸಲದಂಥದ್ದೇ. ಭಾನುವಾರ ಮಧ್ಯಾಹ್ನದೂಟದ ನಂತರ ಮನೋಜ ಕಾಮಕ್ರಿಯೆಯ ಪೀಠಿಕೆ ಹಾಕುತ್ತಾನೆ. ಮಾಯಾ ನವಿರಾಗಿ ಟೀಕಿಸುತ್ತ, 'ಮಕ್ಕಳು ದೊಡ್ಡವರಾಗುತ್ತಿದ್ದಾರೆ. ಅವರು ಅಕಸ್ಮಾತ್ತಾಗಿ ನೋಡಿದರೆ?' ಎಂದು ದೂರ ಸರಿಯುತ್ತಾಳೆ. ಮನೋಜನಿಗೆ ತಪ್ಪಿತಸ್ಥ ಭಾವನೆ ಹುಟ್ಟುತ್ತದೆ. ಅದನ್ನು ಧಿಕ್ಕರಿಸುವಂತೆ, 'ನೋಡಿದರೆ ನೋಡಲಿ ಬಿಡು...' ಎನ್ನುವಾಗ ಮಾಯಾ ಅಸಮಾಧಾನ ತೋರುತ್ತಾಳೆ. ನಂತರ ಪರಸ್ಪರ ತಬ್ಬುಗೆಯಲ್ಲಿದ್ದರೂ ಭಾವನೆಯ ಕೊಂಡಿಕಳಚಿ ತಮ್ಮಷ್ಟಕ್ಕೆ ತಾವಾಗುತ್ತ ಹಳವಂಡಕ್ಕೆ ಜಾರುತ್ತಾರೆ.

ಮಾಯಾಮನೋಜ್ ಮನೆಯಲ್ಲಿ ಮಕ್ಕಳು ಪ್ರತ್ಯೇಕ ಕೋಣೆಗಳನ್ನು ಹೊಂದಿದ್ದಾರೆ. ಪ್ರಸಂಗ ಬಾಗಿಲನ್ನು ತಟ್ಟದೆ ಮೆಸೇಜ್ ಕಳಿಸುತ್ತಾರೆಂದು ಮಾಯಾಗೆ ಗೊತ್ತು. ಹಾಗೆಯೇ ಮನೋಜ ಬಾಗಿಲ ಅಗಳಿ ಹಾಕಿಕೊಂಡಿದ್ದರೆ ಸಾಕಿತ್ತು. ಬದಲು, ಮಕ್ಕಳು ಇಣುಕುವ ಅಳುಕು, ಅದಕ್ಕೆ ದಿವ್ಯ ಅಲಕ್ಷ್ಯ– ಇದರ ಇಂಗಿತ ಏನಿರಬಹುದು? ನಂತರ ತಮ್ಮಷ್ಟಕ್ಕೆ ತಾವು ಆದದ್ದೇಕೆ? ಇದನ್ನು ಅರ್ಥೈಸಿಕೊಳ್ಳಲು ಅವರ ಬಾಲ್ಯಕ್ಕೆ ಹೋಗೋಣ.

ಮನೋಜನಿಗೆ ಏಳೆಂಟು ವರ್ಷ ಇರಬಹುದು. ಆಗವನ ತಾಯಿ ಹಿತ್ತಲಲ್ಲಿ ಬಟ್ಟೆ ಒಗೆಯುತ್ತಿದ್ದರು. ಒಳವುಡುಪು ಇಲ್ಲದೆ ಸೀರೆ ಮಾತ್ರವಿದ್ದು, ಒದ್ದೆಯಾಗಿ ಒಳಮೈ ಕಾಣುತ್ತಿತ್ತು. ತಾಯಿಯ ಅರೆಬೆತ್ತಲೆ ಶರೀರವನ್ನು ಮೊದಮೊದಲು ಕೌತುಕದಿಂದ ವೀಕ್ಷಿಸುತ್ತಿದ್ದ ಮನೋಜ ಹದಿವಯಸ್ಸಿಗೆ ಕಾಲಿಟ್ಟಾಗ ಉದ್ರೇಕಗೊಂಡದ್ದೂ ಇದೆ. ಮಗ ತನ್ನ ನಗ್ನತೆಯಿಂದ ಪ್ರಭಾವಿತನಾಗುತ್ತಿದ್ದಾನೆ ಎಂದು ಗೊತ್ತಾದವಳು ಏನೂ ಮಾತಾಡದೆ ಬಾಗಿಲು ಹಾಕಿಕೊಳ್ಳಲು ಶುರುಮಾಡಿದ್ದಾಳೆ. ಬೆಳೆದ ನಂತರ ಮನೋಜನಿಗೆ ತಾಯಿಯನ್ನು ಹೀಗೆ ಕಲ್ಪಿಸಿಕೊಂಡಿದ್ದಕ್ಕೆ ತಪ್ಪಿತಸ್ಥ ಭಾವ ಕಾಡುತ್ತಿದೆ. ಇತ್ತ ಮಾಯಾ ಐದಾರು ವರ್ಷದವಳಿರುವಾಗ ಒಮ್ಮೆ ಏಕಾಂತದಲ್ಲಿರುವ ತಾಯ್ತಂದೆಯರ ಕೋಣೆಯ ಬಾಗಿಲನ್ನು ತೆರೆದು, ನಡೆಯುವುದನ್ನು ನೋಡಿ ದಿಗ್ಭ್ರಮೆಗೊಂಡಿದ್ದಾಳೆ. ಆಗ ಅವಳಪ್ಪ, 'ಏನು ನೋಡುತ್ತಿದ್ದೀಯಾ? ನಡಿಯಾಚೆ!' ಎಂದು ಗದರಿದ್ದಾನೆ. ಹಾಗಾಗಿಯೇ ಮಕ್ಕಳು ಎಚ್ಚರಿರುವಾಗ ಕೂಟದಲ್ಲಿ ತೊಡಗಲು ಮಾಯಾಳಿಗೆ ತಪ್ಪಿತಸ್ಥ ಭಾವ ಅಡ್ಡಿಬರುತ್ತಿದೆ. ಹೀಗೆ ಬಹುತೇಕ ಎಲ್ಲರ ಬಾಲ್ಯದಲ್ಲೂ ತಾಯ್ತಂದೆಯರ ನಗ್ನತೆಯನ್ನೋ ಕೂಟವನ್ನೋ ನೋಡಿರುವ ಪ್ರಸಂಗವಿದೆ. ಇದು ಪ್ರಬುದ್ಧ ಲೈಂಗಿಕ ಸಂಬಂಧಗಳ ಮೇಲೆ ಏನು ಪರಿಣಾಮ ಬೀರುತ್ತದೆ ಎನ್ನುವುದನ್ನು ಅರ್ಥಮಾಡಿಕೊಳ್ಳಲು ಕಾಲದಲ್ಲಿ ಹಿಂದೆ ಸಾಗೋಣ.

ಗುಹಾವಾಸಿ ಆದಿಮಾನವರನ್ನು ಬಿಡಿ, ಯುಧಿಷ್ಠಿರನು ದ್ರೌಪದಿಯೊಂದಿಗೆ ಏಕಾಂತದಲ್ಲಿದ್ದ ಜಾಗವನ್ನು ದಾಟಿ ಅರ್ಜುನನು ಶಸ್ತ್ರಾಗಾರಕ್ಕೆ ಹೋದದ್ದನ್ನು ಗಮನಿಸಿದರೆ ಮಹಾಭಾರತದ ಕಾಲದಲ್ಲಿ ಮಹಾರಾಜರಿಗೂ ಪ್ರತ್ಯೇಕ ಮಲಗುವ ಕೋಣೆ ಇರಲಿಲ್ಲ ಎನ್ನುವುದು ಗೊತ್ತಾಗುತ್ತದೆ. ಮುಂಚೆಯೆಲ್ಲ ಲೈಂಗಿಕ ಕ್ರಿಯೆ, ಸ್ತನ್ಯಪಾನ, ಸ್ನಾನ ಇಂಥದ್ದೆಲ್ಲ ಯಾವ ಲಜ್ಜೆಯ ಪ್ರಶ್ನೆಯಿಲ್ಲದೆ ಪರಿಚಿತರ ಎದುರೇ ನಡೆಯುತ್ತಿದ್ದುವು ಎಂದು ಇತಿಹಾಸ ಹೇಳುತ್ತದೆ. ಅದಕ್ಕೆಂದೇ ದೇವಾಲಯಗಳ ಮಿಥುನಶಿಲ್ಪಗಳು ನಗ್ನಕಾಮವನ್ನು ಮೆರೆಯುತ್ತಿರುವುದು. ಇದರರ್ಥ ಏನು? ಹಿರಿಯರ ಕೂಟವು ಮಕ್ಕಳಿಗೆ ನಿಷೇಧ ಎನ್ನುವ ಕಲ್ಪನೆಯೇ ಆಗ ಇರಲಿಲ್ಲ. ಏಕಾಂತಕ್ಕಾಗಿ ಗೋಡೆಗಳು ಎದ್ದಿರುವುದು ಕೇವಲ ನೂರೈವತ್ತು ವರ್ಷಗಳೀಚೆಗೆ (ನಾವು ಚಿಕ್ಕಂದಿನಲ್ಲಿ ಏಕಕೋಣೆಯ 'ಮನೆ'ಯಲ್ಲಿ ವಾಸವಾಗಿದ್ದಾಗ ಮೂಲೆಯಲ್ಲಿ ಮೂರಡಿ ಗೋಡೆಯೇರಿಸಿ ಬಚ್ಚಲು ಎಂದು ಬೇರ್ಪಡಿಸಿದ್ದು ನೆನಪಿದೆ. ಪ್ರತ್ಯೇಕ ಮಲಗುವ ಕೋಣೆಯನ್ನು ಕಂಡಿದ್ದು 1977ರಿಂದ ಇತ್ತೀಚೆಗೆ). ಈಗಲೂ ಒಳಗೋಡೆಗಳಿಲ್ಲದ ಮನೆಗಳು ಸಾಕಷ್ಟಿವೆ. ಪ್ರಸಂಗ ಹೀಗಿರುವಾಗ ತಾಯ್ತಂದೆಯರ ಮೈಮೈಥುನಗಳು ಮಕ್ಕಳ ಕಣ್ಣಿಗೆ ಬೀಳುವುದು ಅನಿವಾರ್ಯವಲ್ಲದೆ ಸಹಜ ಕೂಡ. ಇದನ್ನು ನೋಡಿಯೇ ಮಕ್ಕಳಲ್ಲಿ ಕಾಮುಕತೆ ಗರಿಗೆದರುತ್ತದೆ. ಮನಶ್ಶಾಸ್ತ್ರಜ್ಞ ಸಿಗ್ಮಂಡ್ ಫ್ರಾಯ್ಡ್ ಇನ್ನೊಂದು ಹೆಜ್ಜೆ ಮುಂದೆಹೋಗಿ, ಬಾಲ್ಯದಲ್ಲಿ ಗಂಡುಮಗುವು ತಾಯಿಯನ್ನೂ ಹೆಣ್ಣುಮಗುವು ತಂದೆಯನ್ನೂ ಕಾಮಿಸುವುದು ಸಹಜ ಎನ್ನುತ್ತಾನೆ. ಚಿಕ್ಕಮಕ್ಕಳು ಕೈಗೆಟುಕುವ ವಸ್ತುಗಳನ್ನೆಲ್ಲ ಬಾಯಿಗಿಟ್ಟುಕೊಂಡು ರುಚಿಯ ಪರಿಚಯ ಮಾಡಿಕೊಳ್ಳುವ ಮಾತು ಕಾಮಕ್ಕಾಗಿ ಆರಿಸಿಕೊಳ್ಳುವ ವ್ಯಕ್ತಿ ಹಾಗೂ ಸಂಕೇತಗಳಿಗೂ ಅನ್ವಯಿಸುತ್ತದೆ.

ಹಾಗಾದರೆ ತೊಂದರೆ ಎಲ್ಲಿದೆ? ಮಕ್ಕಳು ತಮ್ಮನ್ನು ಗಮನಿಸುವುದನ್ನು ಕಂಡಾಗ ದೊಡ್ಡವರು ಗದರುತ್ತಾರೆ. ನಾಚಿಕೆಯಿಲ್ಲವೆಂದು ತುಚ್ಛೀಕರಿಸುತ್ತಾರೆ. ಇಲ್ಲಿ 'ಹೆತ್ತವರನ್ನು ಮೋಹಿಸಕೂಡದು!' ಎನ್ನುವ ತಪ್ಪು ಎಚ್ಚರಿಕೆಯಿದೆ. ಆದರೆ ಪ್ರಥಮ ಮಾದರಿಗಳಾದ ಅವರನ್ನು ಎಲ್ಲದಕ್ಕೂ ಅನುಕರಿಸಲು ಆಜ್ಞಾಪಿಸಿ, ಕಾಮಕ್ಕೆ ಮಾತ್ರ ನಿಷೇಧ ಹೇರುವುದು ಮಕ್ಕಳಿಗೆ ಗೊಂದಲಕ್ಕೆ ಕಾರಣವಾಗುತ್ತದೆ. ಇದರಲ್ಲಿರುವ ದೂರೀಕರಣದ ಬೆದರಿಕೆಯು ಅನಾಥಭಾವಕ್ಕೂ ಪಾಪಪ್ರಜ್ಞೆಗೂ ಎಡೆಮಾಡಿಕೊಡುತ್ತದೆ. ಒಂದುವೇಳೆ ಎಚ್ಚರಿಕೆ ಇಲ್ಲದಿದ್ದರೆ? ಮಕ್ಕಳು ಬುದ್ಧಿ ಬೆಳೆದಂತೆ ಉಚಿತ–ಅನುಚಿತಗಳ ವ್ಯತ್ಯಾಸಗಳನ್ನು ಅರಿಯುತ್ತ ತಾನಾಗಿಯೇ ಹೊರಬರುತ್ತಾರೆ. ಅದಕ್ಕೆ ಅವಕಾಶ ಇಲ್ಲದಿರುವುದೇ ಪಳೆಯುಳಿಕೆಯಾಗಿ ಮಾಯಾ– ಮನೋಜ್ ಅವರನ್ನು ಕಾಡುತ್ತಿದೆ.

ಈಗ, ನಿಮಗೊಂದು ಸವಾಲು: ನಿಮ್ಮ ಕಾಮಕ್ರಿಯೆಯನ್ನು ಮಕ್ಕಳು ನೋಡಿದರು ಎಂದಿಟ್ಟುಕೊಳ್ಳಿ. ಏನು ಮಾಡುತ್ತೀರಿ? ಅಸಮಾಧಾನ ಬಿಟ್ಟು ಅವರ ಕುತೂಹಲವನ್ನು ಅರ್ಥಮಾಡಿಕೊಳ್ಳಿ. ಕ್ರಿಯೆಯನ್ನು ನಿಲ್ಲಿಸಿ, ಅವರಿಗೇನು ಬೇಕೆಂದು ಶಾಂತವಾಗಿ ಕೇಳಿ. ಉತ್ತರಿಸಿದ ನಂತರ ಬಾಗಿಲು ಹಾಕಿಕೊಂಡು ಹೋಗಲು ಹೇಳಿ, ಅಷ್ಟೆ! ಪರಿಣಾಮ? ಅಪ್ಪಅಮ್ಮ 'ಏನೋ' ನಡೆಸುತ್ತಾರೆ ಎಂದು ಅವರಿಗೆ ಅನ್ನಿಸಬಹುದು. ಇದರಲ್ಲಿ ತಪ್ಪಿಲ್ಲವಷ್ಟೇ ಅಲ್ಲ, ಪ್ರಯೋಜನವಿದೆ: ಪಾರಸ್ಪರಿಕ ಲೈಂಗಿಕತೆಯ ಆರೋಗ್ಯಕರ ಅರಿವಿನ ಮೊಳಕೆ ಮೂಡುವುದೇ ಹೀಗೆ. ಇನ್ನು, ನಿಮ್ಮ ಕ್ರಿಯೆಯ ಬಗೆಗೆ ಪ್ರಶ್ನೆ ಬಂದರೆ? ಉತ್ತರವು ಹೃದಯ ಬಾಯಿಗೆ ಬರುವಷ್ಟು ಕಠಿಣವಲ್ಲ. 'ಪರಸ್ಪರ ಪ್ರೀತಿಸುವ ವ್ಯಕ್ತಿಗಳು ಹೀಗೆ ಮಾಡುವುದು ಸಹಜ. ಬೆಳೆದು ಹೊಣೆಹೊರುವ ವಯಸ್ಸಾದಾಗ ನೀನೂ ಮಾಡುವಿಯಂತೆ'. ಎಂದು ಹೇಳಿಕೊಟ್ಟರೆ ಆಯಿತು.

ಇದೀಗ ಬಂದ ಸುದ್ದಿ: ಇನ್ಸ್ಟಾಗ್ರ್ಯಾಮ್ ತಾಣವೊಂದನ್ನು (mayas_amma) ಓದುತ್ತಿದ್ದೆ. 'ನಿಮ್ಮ ಲೈಂಗಿಕ ಶಿಕ್ಷಕರು ಯಾರು?' ಎಂಬ ಸರಳಪ್ರಶ್ನೆಗೆ ಬಂದ ಪ್ರತಿಕ್ರಿಯೆಗಳೇನು ಗೊತ್ತೆ? ಕಾಮಕ್ರಿಯೆಯ ಪರಿಚಯವನ್ನು ಅನೇಕರು ತಮ್ಮ ಸ್ನೇಹಿತರಿಂದ ಮಾಡಿಕೊಂಡಿದ್ದರೆ, ಸಾಕಷ್ಟು ಜನರು ಹಿರಿಯರಿಂದ ಲೈಂಗಿಕ ದುರ್ಬಳಕೆಗೆ ಒಳಪಟ್ಟು (ಉದಾ. ಎಳೆಯರಿಗೆ ನೀಲಿಚಿತ್ರಗಳನ್ನು ತೋರಿಸಿ ಪ್ರಚೋದಿಸುವುದು) ಅರಿತಿದ್ದಾರೆ! ತಾಯ್ತಂದೆಯರಿಂದ ತಿಳಿದುಕೊಂಡಿರುವವರು ಬಹುಶ: ಅಪರೂಪ. ಎಂಥ ದುರದೃಷ್ಟ! ಇಲ್ಲಿ ನಮಗೆಲ್ಲ ಪಾಠ ಕಲಿಯಕ್ಕಿದೆ: ಮಕ್ಕಳು ಕಾಮಕ್ರಿಯೆಯ ಬಗೆಗೆ ತಾಯ್ತಂದೆಯರ ಮೂಲಕ ತಿಳಿದುಕೊಳ್ಳುವುದು ಸಹಜವಷ್ಟೇ ಅಲ್ಲ, ಪ್ರಕೃತಿಗೂ ಹತ್ತಿರವಾಗುತ್ತದೆ!

ಪ್ರಯೋಗ **24:** ಸಂಗಾತಿಯೊಂದಿಗೆ ಕುಳಿತುಕೊಳ್ಳಿ. ಬಾಲ್ಯದಲ್ಲಿ ನಿಮ್ಮ ತಾಯ್ತಂದೆಯರು ಹತ್ತಿರವಾದುದನ್ನು ಕಂಡಾಗ ಹುಟ್ಟಿದ ಅನಿಸಿಕೆಗಳನ್ನು ಹಂಚಿಕೊಳ್ಳಿ.

ವಾರದ ಪ್ರಶ್ನೆಗಳು: ತಾಯ್ತಂದೆಯರ ಕಾಮವರ್ತನೆಯಿಂದ ಕಾಮ ಜಾಗೃತವಾಗಿದೆಯೆ? ಆಗ ತಪ್ಪಿತಸ್ಥಭಾವ ಕಾಡಿದೆಯೆ? ಹಾಗಾದರೆ ಹೀಗೆಂದುಕೊಳ್ಳಿ: ಅವರಿಬ್ಬರೂ ಒಟ್ಟಿಗೆ ನಗುವಾಗ ನಾನೂ ನಕ್ಕಿದ್ದೇನೆ. ಇದು ತಪ್ಪೆ? ಹಾಸ್ಯದಂತೆ ಕಾಮವೂ ಒಂದು ಭಾವನೆ; ಎಲ್ಲ ಭಾವನೆಗಳೂ ಒಬ್ಬರಿಂದ ಇನ್ನೊಬ್ಬರಿಗೆ ಹರಡುವಂತೆ ಕಾಮವೂ ಹಿರಿಯರಿಂದ ನನಗೆ ಹರಡಿಕೊಂಡಿದೆ ಎಂದುಕೊಳ್ಳಿ. ಮನಸ್ಸಾದರೆ ನನ್ನೊಡನೆ ಹಂಚಿಕೊಳ್ಳಿ.

ಸಂಪರ್ಕಕ್ಕೆ: **8494933888; Email: vinod.chebbi@gmail.com**